ಮೈಸೂರು ವಿಧಾನಸಭೆ

MYSORE LEGISLATIVE ASSEMBLY

Thursday, 15th October, 1970.

The House met in the Assembly Chamber, Vidhana Soudha, Bangalore, at One of the Clock.

MR. DEPUTY SPEAKER (SRI D. MANJUNATH) in the Chair.

STARRED QUESTIONS
(to which oral answers were given)

STARRED QUESTIONS AND ANSWERS

STARTING OF HORTICULTURE FARM OR SEED FARM AT HANSOGI VILLAGE

223. SHRI M. BASAVARAJU (K. R. Nagar):—

Will the Minister for Agriculture be pleased to state :—

(*a*) whether there was any representation from the village Panchayat and others of Hansogi village in K. R. Nagar Taluk for starting of Horticultural Farm or Seed Farm in the village ;

(*b*) if so, the decision of the Government in the matter ?

SRI B. RACHAIAH (Minister for Agriculture):—

(*a*) Yes. Only one representation from the M. L. A.

(*b*) The Director of Agriculture has been instructed on 6th October 1969 to keep this proposal in view while submitting proposals for starting Seed farms in Mysore District to cater to the needs of K. R. Nagar Taluk.

ಶ್ರೀ ಎಂ. ಬಸವರಾಜು:—ಹನಸೋಗೆ ಗ್ರಾಮದಲ್ಲಿ ಹಾರ್ಟಿಕಲ್ಚರಲ್ ಫಾರ್ಮ ಅಥವಾ ಸೀಡ್ ಫಾರಂ ಪ್ರಾರಂಭಿಸುವ ವಿಷಯದಲ್ಲಿ ಭರವಸೆ ಕೊಡುವಿರಾ ?

ಶ್ರೀ ಬಿ. ರಾಚಯ್ಯ:– ಇನ್‌ಫರ್ಮೇಷನ್ ಹೇಳಬಹುದು, ಭರವಸೆ ಕೊಡುವ ಟೈಂ ಇದಲ್ಲ.

ಶ್ರೀ ಎಂ. ಎಚ್. ಜಯಪ್ರಕಾಶ ನಾರಾಯಣ:—ಈ ಫಾರಂಗಳನ್ನು ಸ್ಥಾಪಿಸುವ ವಿಷಯದಲ್ಲಿ ಸರಕಾರ ಅನುಸರಿಸುವ ನೀತಿಯೇನು ? ಈಗ ಎಷ್ಟು ಬೀಜ ಉತ್ಪತ್ತಿ ಮಾಡಲಾಗಿದೆ ? ಯಾವ ಯಾವ ಬೀಜ ಉತ್ಪತ್ತಿಮಾಡಲಾಗಿದೆ ? ಉಮ್ಮ ಫಾರಂನಲ್ಲಿ ಏಕೆ ಬೀಜ ಉತ್ಪತ್ತಿಯಾಗುತ್ತಿಲ್ಲ ?

SRI B. RACHAIAH:—Notice, Sir

ಶ್ರೀ ಬಿ. ಶ್ರೀಕಂಠಯ್ಯ:—ನಂಜನಗೂಡು ತಾಲ್ಲೂಕಿನಲ್ಲಿ ಒಂದು ಸೀಡ್ ಫಾರಂ ಸ್ಥಾಪಿಸುವ ಯೋಜನೆಯಿತ್ತು. ಅದನ್ನು ಯಾವಾಗ ಸ್ಥಾಪಿಸಲಾಗುವುದು ?

SRI B. RACHAIAH:—This question pertains to K. R. Nagar Taluk. If a separate question is put, I will be able to give the information.

ಶ್ರೀ ಎಂ. ಎಚ್. ಜಯಪ್ರಕಾಶನಾರಾಯಣ:—ಈ ಫಾರಂಗಳನ್ನು ಸ್ಥಾಪಿಸುವಾಗ ಅನುಸರಿಸುವ ನೀತಿ ಯಾವುದು ಎಂದು ಕೇಳಿದರೆ ಅದಕ್ಕೂ ನೋಟೀಸು ಎಂದು ಹೇಳುವುದು ಸರಿಯೇ ?

ಶ್ರೀ ಬಿ. ರಾಚಯ್ಯ:—ಪ್ರಶ್ನೋತ್ತರಗಳ ವೇಳೆಯಲ್ಲಿ ನೀತಿಯನ್ನು ನಿರೂಪಣೆ ಮಾಡುವುದಕ್ಕಾಗುವುದಿಲ್ಲ.

ಶ್ರೀ ಎಸ್. ಎಚ್. ವೆಟ್ಟರಂಗನಾಥ್:—ಇದುವರೆಗೆ ಎಷ್ಟು ಸೀಡ್ ಫಾರಂಗಳನ್ನು ತೆರೆಯಲಾಗಿದೆ ?

ಶ್ರೀ ಬಿ. ರಾಚಯ್ಯ:—ಅದಕ್ಕೆ ಬೇರೆ ಪ್ರಶ್ನೆ ಕೇಳಿದರೆ ಹೇಳಬಹುದು.

ಶ್ರೀ ಎಂ. ನಾಗಪ್ಪ:—ಕೆ. ಆರ್. ನಗರಕ್ಕೆ ಫಾರಂ ಮಂಜೂರು ಮಾಡುವ ಬಗ್ಗೆ ಬಿ ಪ್ರಶ್ನೆಗೆ ಉತ್ತರ ಹೇಳಿರುವಂತೆ ಯಾವ ಯಾವ ಪ್ರಪೋಸಲ್ಲುಗಳಿವೆ ?

ಶ್ರೀ ಬಿ. ರಾಚಯ್ಯ:—ಮೈಸೂರು ಜಿಲ್ಲೆಗೆ ಸೀಡ್ ಫಾರಂ ಮತ್ತು ಹಾರ್ಟಿಕಲ್ಚರಲ್ ಫಾರಂ ಬೇಕೆಂದು ಕೇಳಿದಾಗ ಅಲ್ಲಿನ ಅವಶ್ಯಕತೆ ಮತ್ತು ಭೂಗುಣ ನೋಡಿ ಗಮನದಲ್ಲಿಟ್ಟು ಕೊಳ್ಳುವಂತೆ ತಿಳಿಸಲಾಗಿದೆ.

ಶ್ರೀ ಎ. ಆರ್. ಬದರಿನಾರಾಯಣ:–ಹೆಚ್ಚು ಬೆಳೆಯಬೇಕೆಂಬ ದೃಷ್ಟಿಯಿಂದ ಈ ಫಾರಂ ಸ್ಥಾಪಿಸುತ್ತಿದೆ ಅಲ್ಲವೇ ?

ಶ್ರೀ ಬಿ. ರಾಚಯ್ಯ:—ಎಲ್ಲಾ ತಾಲ್ಲೂಕುಗಳಲ್ಲೂ ಮಲಿ ಪರ್ಪಸ್ ಹಾರ್ಟಿಕಲ್ಚರಲ್ ಫಾರಂ ಸ್ಥಾಪಿಸಬೇಕೆಂಬ ಯೋಜನೆ ಇದೆ.

SRI B. B. SAYANAK:—May I know when the Government received representation from the village panchayat and the M. L. A. ?

SRI B. RACHAIAH:—I do not have the date with me.

ಶ್ರೀ ಎಂ. ಬಸವರಾಜು:—ಹಸಿರುಕ್ರಾಂತಿ ಯಶಸ್ವಿಯಾಗಬೇಕಾದರೆ ಹಾರ್ಟಿಕಲ್ಚರಲ್ ಮತ್ತು ಸೀಡ್ ಫಾರಂಗಳನ್ನು ಸ್ಥಾಪಿಸುವುದು ಅತ್ಯಾವಶ್ಯಕವೆಂಬುದು ಸರಕಾರದ ನೀತಿಯಲ್ಲವೆ ?

ಶ್ರೀ ಬಿ. ರಾಚಯ್ಯ:—ಅದನ್ನು ಎಷ್ಟು ಪ್ರಮಾಣದಲ್ಲಿ ಮಾಡಬೇಕೆಂಬುದು ಆಲೋಚನೆಯಲ್ಲಿದೆ.